1055

ರಂಗಯ್ಯನ ದುರ್ಗದ ಸರ್ವೆ ನಂ. 5 ವ 4 ಇವುಗಳ ಮಧ್ಯೆ ಹೋಗಿ, ರಂಗಯ್ಯನ ದುರ್ಗದ ಸರ್ವೆ ನಂ 3ರ ನೈರುತ್ಯ ಮೂಲೆಗೆ ಸುಮಾರು 1 ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(b) ವರ್ಷವೆಲ್ಲಾ, ಜನಗಳ, ದನಗಳ ಮತ್ತು ಗಾಡಿಗಳ ಉಪಯೋಗಕ್ಕಾಗಿ ತಾರೇಹಳ್ಳಿಯಿಂದ ಗುರುಶಿದ್ದಾಪುರಕ್ಕೆ ಹೋಗುವ 12 ಅಡಿ ಅಗಲವುಳ್ಳ 4 ಮೈಲು ದೂರವುಳ್ಳ ಗಾಡಿಹಾದಿ. ಈ ಹಾದಿಯು ಫಾರೆಸ್ಟನ್ನು ತಾರೇಹಳ್ಳಿಯ ಸರ್ವೆ ನಂ. 61ರ ಆಗ್ನೇಯ ಮೂಲೆಗೆ ಸುಮಾರು 1½ ಫರ್ಲಾಂಗು ದೂರದಲ್ಲಿ ಪ್ರವೇಶಿಸಿ ಉತ್ತರಾಭಿಮುಖವಾಗಿ ತಾರೇಹಳ್ಳಿಯ ಸರ್ವೆ ನಂ. 59 ವ 58, ಉರ್ಲಕಟ್ಟೆಯ ಸರ್ವೆ ನಂ. 16 ಮತ್ತು ಗುರುಶಿದ್ದಾಪುರದ ಸರ್ವೆ ನಂ. 56 ವ 55 ಇವುಗಳಲ್ಲಿ ಹಾದು, ಕೂನೇ ಗ್ರಾಮದ ಸರ್ವೆ ನಂ. 73ರ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(c) ವರ್ಷವೆಲ್ಲಾ, ಜನಗಳ, ದನಗಳ ಮತ್ತು ಗಾಡಿಗಳ ಉಪಯೋಗಕ್ಕಾಗಿ 12 ಅಡಿ ಅಗಲವುಳ್ಳ 2½ ಮೈಲಿ ದೂರವುಳ್ಳ ಉರ್ಲಕಟ್ಟೆಯಿಂದ ಚಿಕ್ಕ ಬನ್ನಿಹಟ್ಟಿಗೆ ಹೋಗುವ ಗಾಡಿ ಹಾದಿ. ಈ ಹಾದಿಯು ಫಾರೆಸ್ಟನ್ನು ಉರ್ಲಕಟ್ಟೆಯ ಸರ್ವೆ ನಂ. 37ರ ಈಶಾನ್ಯ ಮೂಲೆಗೆ ಸುಮಾರು 1½ ಫರ್ಲಾಂಗು ದೂರದಲ್ಲಿ ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಉರ್ಲಕಟ್ಟೆಯ ಸರ್ವೆ ನಂ. 17 ವ 16 ಗಾಡಿಕಟ್ಟೆಯ ಸರ್ವೆ ನಂ. 7ರಲ್ಲಿ ಹಾದು ಗಾಡಿಕಟ್ಟೆಯ ಸರ್ವೆ ನಂ. 4ರ ಪಶ್ಚಿಮ ಮೂಲೆಗೆ ಸುಮಾರು 1 ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ; ಪುನಹಾ ಫಾರೆಸ್ಟನ್ನು ಮಲಮಾಚಿಕೆರೆ ಸರ್ವೆ ನಂ. 21ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ ಆಗ್ನೇಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ ನಂ. 16 ಚಿಕ್ಕಬನ್ನಿಹಟ್ಟಿಯ ಸರ್ವೆ ನಂ. 43ರಲ್ಲಿ ಹಾದು ಚಿಕ್ಕ ಬನ್ನಿ ಹಟ್ಟಿಯ ಸರ್ವೆ ನಂ. 27ರ ವಾಯವ್ಯ ಮೂಲೆಗೆ ಸುಮಾರು ½ ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಟ್ಟುಬಿಡುತ್ತದೆ.

(d) ವರ್ಷವೆಲ್ಲಾ, ಜನಗಳ, ದನಗಳ ಮತ್ತು ಗಾಡಿಗಳ ಉಪಯೋಗಕ್ಕಾಗಿ ಮಲಮಾಚಿಕೆರೆಯಿಂದ ಕಣಕುಪ್ಪೆಗೆ ಹೋಗುವ 12 ಅಡಿ ಅಗಲವುಳ್ಳ 3½ ಮೈಲಿ ದೂರವುಳ್ಳ ಗಾಡಿಹಾದಿ. ಈ ಹಾದಿಯು ಫಾರೆಸ್ಟನ್ನು ಮಲಮಾಚಿಕೆರೆಯ ಸರ್ವೆ ನಂ. 18ರ ನೈರುತ್ಯ ಮೂಲೆಯಲ್ಲಿ ಪ್ರವೇಶಿಸಿ, ದಕ್ಷಿಣಾಭಿಮುಖವಾಗಿ ಇದೇ ಗ್ರಾಮದ ಸರ್ವೆ ನಂ. 16, 15 ವ 14 ಕಣಕುಪ್ಪೆಯ ಸರ್ವೆ ನಂ. 95, 94, 90 ವ 89 ಇವುಗಳಲ್ಲಿ ಹಾದು ಕಳಗೋಟ್ಟೆ ಗ್ರಾಮದ ಸರ್ವೆ ನಂ. 3ರ ನೈರುತ್ಯ ಮೂಲೆಗೆ ಸುಮಾರು ½ ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯೂಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಬೆಂಗಳೂರ ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕರ್ಕಾರಹಳ್ಳಿ ತಾಲ್ಲೂಕು ಕೋಡಿಹಳ್ಳಿ ಹೋಬಳಿ ಸರ್ವಮಾನ್ಯ ಯರಹಳ್ಳಿ ಗ್ರಾಮವು ಸ೯ 1904ನೆ ಜುಲ್ಯೈ ಮಾಹೆ 20ನೆ ತಾರೀಖಿನಲ್ಲಿ ಕರ್ಕಾರಹಳ್ಳಿ ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂನ್ ತಿಂಗಳು 23ನೆ ತಾರೀಖು ನಂಬರ್ 25ನೆ ಮೈಸೂರು ಗೆಜೆಟ್ 2ನೆ ಭಾಗದ 387ನೆ ಪೇಜಿನಲ್ಲಿ ಫಾಯಿಷ್ ಆಗಿದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಜೋಡಿ ಚಿಕ್ಕಲೂರು ಗ್ರಾಮವು ಸ೯ 1904ನೆ ಇಸವಿ ಜುಲೈ 25ನೆ ತಾರೀಖಿನಲ್ಲಿ ಮಾಗಡಿ ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂನ್ ತಿಂಗಳು 23ನೆ ತಾರೀಖು ನಂಬರ್ 25ನೆ ಮೈಸೂರ ಗೆಜೆಟ್ 2ನೆ ಭಾಗದ 386ನೆ ಪೇಜಿನಲ್ಲಿ ಫಾಯಿಷ್ ಆಗಿ ಇದೆ.

ಅಹವುದಲ್ಲಿ,
ಫಾರ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 7ನೆ ಜೂನ್ 1904.

1903—04ನೆ ಸಾಲ್ ಆಖೈರ್ ವರಿಗೆ ಸರಕಾರಕ್ಕೆ ಬರಬೇಕಾದ ಕಂದಾಯ ಬಾಕಿಗಾಗಿ ತೀರ್ಥಹಳ್ಳಿ ತಾಲ್ಲೂಕು ಮಂಡಗದ್ದೆ ಹೋಬಳಿ ಹಗರತ್ತಿ ಜೋಡಿ ಗ್ರಾಮವು 1904ನೆ ಇಸವಿ ಆಗಸ್ಟ್ 5ನೆ ತಾರೀಖಿನ ದಿವಸ ಶಿವಮೊಗ್ಗ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದ ಹರಾಜು ಮಾಡಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪಶೀಲುಗಳ ಬಗ್ಗೆ ತಾರೀಖು 16—6—1904ನೆ ಮುರ್ನಂ 24ನೆ ನಂಬರು ಮೈಸೂರು ಗೆಜೆಟ್ 2ನೆ ಭಾಗದ 378—379ನೆ ಪುಟದಲ್ಲಿ ಫಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಎಂ. ಎಸ್. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಚಿಕ್ಕಮಗಳೂರು ತಾಲ್ಲೂಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ : —ಕಾಫಿ ಸಾಗುವಳಿಗೆ ಉಸ್ತುವಾರಿ ಎಸ್ಟೇಟ್ ಮಾ॥ ಡಬ್ಲ್ಯೂ. ಕಾಫರ್ಡ್ ಸಾಹೇಬರವರು ದರಖಾಸ್ತು ಮಾಡಿರುವ ಚಿಕ್ಕಮಗಳೂರು ತಾಲ್ಲೂಕು ಬಿದರೆ ಗ್ರಾಮದಲ್ಲಿರುವ ಸರ್ವೆ ನಂಬರು 23, ಎಕರೆ 10, ಗುಂಟೆ 38, ಮತ್ತು 224, ಎಕರೆ 53, ಗುಂಟೆ 19, ಜುಮ್ಲಾ ಎಕರೆ 64, ಗುಂಟೆ 17 ಉಳ್ಳ ಜಮೀನನ್ನು ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ರವರಿಂದ ಸ೯ 1904ನೆ ಇಸವಿ ಜುಲೈ ತಾರೀಖು 20ನೆ ಬುಧವಾರ ದಿವಿ 11 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಜಾಸ್ತಿ ತಪಶೀಲು 16—6—04ನೆ ಮುರ್ನಂ 24ನೆ ನಂಬರು ಮೈಸೂರ ಗೆಜೆಟಿನ 2ನೆ ಭಾಗದ 380ನೆ ಪುಟದಲ್ಲಿ ನಮೂದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಎಂ. ನಾರಾಯಣರಾವ್,
ಡೆಪ್ಯೂಟಿ ಕಮಿಷನರ್.